**ದಿನಾಂಕಃ 17.06.2022 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ-ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಜಿ.ಜಿ. ವಕೀಲರಿಂದಃ-**

1963 ರಲ್ಲಿ ಸಂಜೀವಪ್ಪ ಮತ್ತು ನನ್ನ ತಂದೆ ಓಬಣ್ಣ ದಾವಾ ಆಸ್ತಿಗಳು ಮತ್ತು ಇತರೆ ಆಸ್ತಿಗಳನ್ನು ಮಾರಾಟ ಮಾಡಿದ್ದರು, ಹಾಗಾಗಿ ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಓಬಣ್ಣ ಮತ್ತು ಸಂಜೀವಪ್ಪರವರ ಭಾಗದ ಆಸ್ತಿಗಳು ಖರೀದಿದಾರ ದೊಡ್ಡಮಲ್ಲಪ್ಪನವರ ಮಗ ಸಿದ್ದಣ್ಣನವರ ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ. ಸಣ್ಣಹನುಮಪ್ಪನವರ ಮಕ್ಕಳಾದ ಸಿದ್ದಪ್ಪ, ರಂಗಸ್ವಾಮಿ ಮತ್ತು ಹನುಮಂತಪ್ಪ 1988 ರಲ್ಲಿ ಪಂಚಾಯಿತಿ ಮಾಡಿ ಅವರ ಭಾಗಕ್ಕೆ ಬರುವಂತಹ ಆಸ್ತಿಗಳನ್ನು ಖರೀದಿದಾರರಿಂದ ಬಿಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ಸಿದ್ದಪ್ಪ, ರಂಗಸ್ವಾಮಿ ಮತ್ತು ಹನುಮಂತಪ್ಪನವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

2. ಬಂಡಿ ಕೆಂಚಪ್ಪ, ಸಂಜೀವಪ್ಪ ಮತ್ತು ನನ್ನ ತಂದೆ ಓಬಣ್ಣ ಗುರ್ಜೆ ಮಲ್ಲಪ್ಪನ 2 ನೇ ಹೆಂಡತಿ ತೊಪಮ್ಮನ ಮಕ್ಕಳು ಎಂದರೆ ಸರಿಯಲ್ಲ. ನಿಪಿ-2 ನಮ್ಮ ಮನೆಯಲ್ಲಿತ್ತು. ನಿಪಿ-2 ಕ್ಕೆ ಪ್ರತಿವಾದಿ 1 ರಿಂದ 3 ರವರು ಮತ್ತು ತಿಪ್ಪೇಸ್ವಾಮಿ ಮತ್ತು ಹನುಮಂತಪ್ಪ ಎನ್ನುವವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಜುಬಾನಿ ಪಾಲುವಿಭಾಗ ಪತ್ರದ ಪ್ರಕಾರ ದಾವಾ ಸ್ವತ್ತುಗಳನ್ನು ಅನುಭವಿಸುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ವಿಚಾರ ಪ್ರತಿವಾದಿಯರಿಗೆ ಮತ್ತು ತಿಪ್ಪೇಸ್ವಾಮಿ ಮತ್ತು ಹನುಮಂತಪ್ಪ ಇವರಿಗೆ ಗೊತ್ತಿಲ್ಲ, ನಾವೇ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಅನುಭೋಗ ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ-ಸವಾಲುಃ 4 ರಿಂದ 6 ಪ್ರತಿವಾದಿ ಪರ ಶ್ರೀ ಕೆ.ಬಿ.ಟಿ. ವಕೀಲರಿಂದಃ-**

ಪ್ರತಿವಾದಿ 1 ರಿಂದ 3 ರವರ ಪರ ವಕೀಲರು ಮಾಡಿದ ಪಾಟೀ-ಸವಾಲನ್ನು ಅನುವಾದಿಸಿಕೊಳ್ಳಲು ಪ್ರಾರ್ಥಿಸುತ್ತಾರೆ.

ಪ್ರತಿವಾದಿ 1 ರಿಂದ 3 ರವರ ಪಾಟೀ–ಸವಾಲನ್ನು ಪ್ರತಿವಾದಿ 4 ರಿಂದ 6 ರವರ ಪಾಟೀ–ಸವಾಲು ಎಂದು ಅನುವಾದಿಸಿಕೊಳ್ಳಲು ಅನುಮತಿ ನೀಡಲಾಯಿತು.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.